ಎಲ್ಲೆಂದರಲ್ಲಿ ಯಾವಾಗ ಬೇಕಾದರೂ ಅತಿ ಸುಲಭದಲ್ಲಿ ಕಡಿಮೆ ಖರ್ಚಿನಲ್ಲಿ ಆಡಬಹುದಾದ ಫುಟ್ಬಾಲ್ ಆಟ ಮಕ್ಕಳನ್ನು ಎಚ್ಚರದಲ್ಲೂ ಸ್ವಪ್ನದಲ್ಲೂ ಕಾಡುತ್ತದೆ. ಲೀಗ್ ಫುಟ್ಬಾಲಲ್ಲಿರುವ ಅಪಾರ ಹಣ, ಜನಪ್ರಿಯತೆ, ಜಾಹೀರಾತು, ವ್ಯಾಪಾರೀ ತಂತ್ರ ಎಲ್ಲವೂ ಸೇರಿ ಹೊಸ ಪ್ರೇಕ್ಷಕರನ್ನು ಸೇರಿಸಿಕೊಳ್ಳುತ್ತದೆ. ಟಿ.ವಿ, ಸಾಮಾಜಿಕ ಮಾಧ್ಯಮ, ಪಬ್ಬಿನಲ್ಲಿ ಶುಕ್ರವಾರ ಸಂಜೆಯ ಹರಟೆ ಹೀಗೆ ಎಲ್ಲೆಡೆಯೂ ಹರಡುತ್ತದೆ. 'ಜೆಂಟಲ್ ಮ್ಯಾನ್‌ಗಳ ಆಟ' ಎಂದು ಹೆಸರಾದ ಕ್ರಿಕೆಟ್ ಆಟದ ಈಗಿನ ಇಂಗ್ಲಿಷ್ ಪ್ರೇಕ್ಷಕ ವರ್ಗದಲ್ಲಿ ಬಹುಪಾಲು ಜನರು ನಲವತ್ತು ಐವತ್ತು ವರ್ಷ ಮೇಲಿನವರು ಅಂದರೆ ನಿಜವಾಗಲೂ ಪ್ರಬುದ್ಧ ವಯಸ್ಕ ಜೆಂಟಲ್ ಮ್ಯಾನ್‌ಗಳು.

ಕ್ರೀಡೆ ಯಾವುದೇ ಇದ್ದರೂ, ಗತಕಾಲದ ಘಟನೆಗಳಿಂದಾಗಿ ಆಯಾ ಕ್ರೀಡೆಗೆ ತಕ್ಕಂತೆ ಕೆಲವು ದೇಶಗಳ ವಿರುದ್ಧ ಆಡುವಾಗ ತಾವು ಗೆಲ್ಲಲೇಬೇಕೆಂದು ಇಂಗ್ಲಿಷ್ ಕ್ರೀಡಾಭಿಮಾನಿಗಳು ಹಾರೈಸುತ್ತಾರೆ. ಕ್ರಿಕೆಟಿನ ಮಟ್ಟಿಗೆ ಅದು ಆಸ್ಟ್ರೇಲಿಯಾದ ವಿರುದ್ಧ, ಫುಟ್ಬಾಲ್ ಆದರೆ ಜರ್ಮನಿ, ಫ್ರಾನ್ಸ್‌ಗಳ ವಿರುದ್ಧ. ತಮ್ಮ ಬದ್ಧವೈರಿಯ ಜೊತೆ ಒಂದು ವೇಳೆ ಸೋತರೆ, ವಿಶೇಷ ಟಿಪ್ಪಣಿ ಅಥವಾ ವ್ಯಂಗ್ಯದಲ್ಲೇ ಪಂದ್ಯ ಮತ್ತು ವಿಶ್ಲೇಷಣೆ ಎರಡನ್ನೂ ಮುಗಿಸುತ್ತಾರೆ. ಈ ಹಿಂದೊಮ್ಮೆ ಇಂಗ್ಲೆಂಡ್ ಆಸ್ಟ್ರೇಲಿಯಾಕ್ಕೆ ಸೋತಾಗ ಬೇಸರಗೊಂಡ ನನ್ನ ಕಚೇರಿಯ ಕ್ರಿಕೆಟ್ ಅಭಿಮಾನಿ, ಕ್ರಿಕೆಟ್ ಮಟ್ಟಿಗೆ ಆಸ್ಟ್ರೇಲಿಯಾಕ್ಕೆ ಎಷ್ಟು ಅದೃಷ್ಟ ಇದೆಯೋ ತಮ್ಮ ದೇಶಕ್ಕೆ ಅಷ್ಟೇ ಪಾಲಿನ ದುರದೃಷ್ಟ ಇದೆ ಎಂದು ಸಮರ್ಥನೆ ನೀಡಿದ್ದ! ಹಾಗಂತ ಇಂತಹ ಹಲವು ಸೋಲುಗಳನ್ನು ಅರಗಿಸಿಕೊಂಡಿರುವ ಲಾರ್ಡ್ಸ್ ಮೈದಾನ ಇದನ್ನು ತನ್ನ ದುರದೃಷ್ಟ ಎಂದೇ ತಿಳಿಯಬಹುದು.

ಲಾರ್ಡ್ಸ್‌ನಲ್ಲಿ ನಡೆದ 2002ರ ನಾಟ್ ವೆಸ್ಟ್ ಸರಣಿಯ ಕೊನೆಯ ಪಂದ್ಯದಲ್ಲಿ ಭಾರತ ಇಂಗ್ಲೆಂಡನ್ನು ವೀರೋಚಿತವಾಗಿ ಹೋರಾಡಿ ಸೋಲಿಸಿತ್ತು. ಯುವರಾಜ್ ಮತ್ತು ಕೈಫ್ ಅಂದಿನ ಪಂದ್ಯದ ಜೋಡಿ ಹೀರೋಗಳು. ಈ ಪಂದ್ಯವನ್ನು ಭಾರತ ತಂಡದ ಡ್ರೆಸಿಂಗ್ ರೂಮಿನ ಬಾಲ್ಕನಿಯಲ್ಲಿ ನಿಂತು ಉಗುರು ಕಚ್ಚುತ್ತಾ ನೋಡಿ ಮುಗಿಸಿದ್ದ ಆಗಿನ ನಾಯಕ ಸೌರವ್ ಗಂಗೂಲಿ, ತಡೆಯಲಾಗದ ಉದ್ವೇಗ, ಸಂತೋಷದಲ್ಲಿ ಬಾಲ್ಕನಿಯಲ್ಲೇ ನಿಂತು ಎಲ್ಲರೆದುರೇ ಅಂಗಿಯನ್ನು ಕಳಚಿ ಕೈಯಲ್ಲಿ ಹಿಡಿದು ಗರಗರ ತಿರುಗಿಸಿದ್ದು. ಈಗಲೂ ಆ ಕಾರಣಕ್ಕೆ ಅತಿಥಿ ತಂಡದ ಬಾಲ್ಕನಿಯನ್ನು 'ಗಂಗೂಲಿ ಬಾಲ್ಕನಿ' ಎಂದೇ ಅನೌಪಚಾರಿಕವಾಗಿ ಕರೆಯುತ್ತಾರೆ. ಎಷ್ಟೇ ಆನಂದ ಆಗಲಿ ಇಂಗ್ಲೆಂಡ್ ಕ್ರಿಕೆಟಿನ ಸಂಪ್ರದಾಯಸ್ಥ ಪ್ರೇಕ್ಷಕರು ಹೆಚ್ಚೆಂದರೆ ಕೂತಲ್ಲೇ, ಅಲ್ಲದಿದ್ದರೆ ಎದ್ದು ನಿಂತು ಕೈ ತಟ್ಟಿ ಅತಿಯಾದ ಹರ್ಷವನ್ನು ಸೂಚಿಸುವವರು, ಕ್ರಿಕೆಟಿನ 'ಜೆಂಟಲ್ ಮ್ಯಾನ್' ಪರಂಪರೆಯನ್ನು ಮುರಿದ ಆ ಘಟನೆಯನ್ನು ಕಂಡು ಬೆರಗಾಗಿದ್ದರು. ಲಾರ್ಡ್ಸ್ ಮೈದಾನವಂತೂ ಆಂಗ್ಲ ಸಂಪ್ರದಾಯ ರಿವಾಜನ್ನು ಮೀರಿದ ಭಾರತೀಯನ ನಡವಳಿಕೆಗೆ ನಾಚಿ ಮುದ್ದೆ ಆಗಿರಬಹುದು.

ಇದೇ ಮೈದಾನದಲ್ಲಿ ನಡೆದ ಇನ್ನೊಂದು ಪಂದ್ಯದಲ್ಲಿ ಇಂತಹುದೇ ಘಟನೆ ಮತ್ತೊಮ್ಮೆ

